ಸಾಕ್ಷಿಯನ್ನು ದಿಃ **20.03.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಆರ್.ಎಲ್ ವಕೀಲ**ರಿಂದ**

ಅರ್ಜಿದಾರರು ನನ್ನ ತಂದೆ. 1 ಎದುರುದಾರರು ನನ್ನ ಅಜ್ಜಿ. 2, 4 ಮತ್ತು 5 ನೇ ಎದುರುದಾರರು ನನ್ನ ಚಿಕ್ಕಪ್ಪಂದಿರಾಗಬೇಕು. 3 ನೇ ಎದುರುದಾರರು ನನ್ನ ಸೋದರತ್ತೆ. 6 ನೇ ಎದುರುದಾರರು 3 ನೇ ಎದುರುದಾರರಾದ ನನ್ನ ಸೋದರತ್ತೆ ಮಗನಾಗಿದ್ದಾರೆ. 2 ನೇ ಎದುರುದಾರರು ಹುಟ್ಟಿದಾಗಿನಿಂದಲೂ ಮೂಗರು ಮತ್ತು ಬುದ್ದಿಮಾಂಧ್ಯರಾಗಿದ್ದರು ಎಂದರೆ ಸರಿ. ಅವರಿಗೆ ವ್ಯವಹಾರಿಕ ಅಥವಾ ಪ್ರಾಪಂಚಿಕ ಜ್ಞಾನ ಯಾವುದೂ ಇರಲಿಲ್ಲ ಎಂದರೆ ಸರಿ. ಅವರಿಗೆ ಹೊಟ್ಟೆ ಹಸಿವಾದರೆ ಅಥವಾ ಹೊರಗಡೆ ಹೋಗಬೇಕೆಂದರೆ ಸನ್ನೆ ಮೂಲಕ ತಿಳಿಸುತ್ತಿದ್ದರು, ಇಷ್ಟನ್ನು ಹೊರತು ಪಡಿಸಿ ಅವರಿಗೆ ಯಾವುದೆ ಚಟುವಟಿಕೆ ಸಾಧ್ಯವಿರಲಿಲ್ಲ. 1 ನೇ ಎದುರುದಾರಾದ ನನ್ನ ಅಜ್ಜಿ 2010 ರಲ್ಲೆ ಪಾರ್ಶವಾಯು ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದಿದ್ದರು ಎಂದರೆ ಸರಿ. ಈ ಕಾಯಿಲೆ ಬಂದ ನಂತರ 1 ನೇ ಎದುರುದಾರರಿಗೆ ಯಾರನ್ನೂ ಗುರುತಿಸುವ ಶಕ್ತಿ ಇರಲಿಲ್ಲ ಎಂದರೆ ಸರಿ. ಆ ಕಾರಣ ಅವರಿಗೆ ಎಲ್ಲಿಯಾದರು ಹೋಗಬೇಕೆಂದರೆ ಬೇರೆಯವರ ಸಹಾಯ ಬೇಕಾಗಿತ್ತು ಎಂದರೆ ಸರಿ.

ಈ ರೀತಿ 1 ನೇ ಎದುರುದಾರರು ಕಾಯಿಲೆಯಿಂದ ನರಳುತ್ತಿದ್ದ ಕಾರಣ ಅವರಿಗೆ ಯಾವುದೆ ಗುರುತಿಸುವ ಶಕ್ತಿ ಆಗಲಿ ಅಥವಾ ಯಾವುದೆ ವ್ಯವಹಾರವಾಗಲಿ ಅವರಿಗೆ ಅರ್ಥ ಆಗುತ್ತಿರಲಿಲ್ಲ ಎಂದರೆ ಸರಿ. ಅಂತಹ ಪರಿಸ್ಥಿತಿಯಲ್ಲಿ 3 ನೇ ಎದುರುದಾರರು 1 ಮತ್ತು 2 ನೇ ಎದುರುದಾರರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ 6 ನೇ ಎದುರುದಾರರ ಹೆಸರಿಗೆ ವಿಲ್ ಅನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಅವೆಲ್ಲಾ ವಿಚಾರಗಳು ನನಗೆ ಗೊತ್ತಿಲ್ಲ, ಆದರೆ 1 ಮತ್ತು 2 ನೇ ಎದುರುದಾರರು 3 ನೇ ಎದುರುದಾರರ ಜೊತೆಯಲ್ಲಿ ವಾಸವಿದ್ದದ್ದು ನಿಜ. 6 ನೇ ಎದುರುದಾರರಿಗೆ ಆಗಿದೆ ಎನ್ನಲಾದ ವಿಲ್ ವಿಚಾರ ಈ ಕೇಸ್

ಹಾಕಿದ ನಂತರ ನಮ್ಮ ಗಮನಕ್ಕೆ ಬಂದಿದೆ. 2 ನೇ ಎದುರುದಾರರು ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಪ್ರಸ್ತುತ ಪಡಿಸಿರುವ ವಿಲ್ ನನ್ನ ಪ್ರಕಾರ ಸೃಷ್ಟನೆಯ ದಾಖಲೆ ಆಗಿದೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.